**ದಿನಾಂಕ 19-9-2015 ರಂದು ಬೆಳಿಗ್ಗೆ 11.00 ಗಂಟೆಗೆ ಕುಲಪತಿಗಳವರ ಸಭಾಂಗಣ, ಕೃವಿವಿ ರಾಯಚೂರಿನಲ್ಲಿ ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವ್ಯವಸ್ಥಾಪನಾ ಮಂಡಳಿಯ ಇಪ್ಪತ್ನಾಲ್ಕನೇಯ ಸಭೆಯ ನಡುವಳಿಗಳು:**

**ಉಪಸ್ಥಿತರಿದ್ದ ಸದಸ್ಯರು:**

| | | |
|---|---|---|
| 1. | ಡಾ. ಪಿ.ಎಂ. ಸಾಲಿಮಠ | ಅಧ್ಯಕ್ಷರು |
| 2. | ಡಾ. ಹೆಚ್.ಎಸ್. ಸಾದತ್ ಅಲಿ ಖಾನ್ | ಸದಸ್ಯರು |
| 3. | ಶ್ರೀ ಪ್ರವೀಣ ವಿ. ನಾಯಕ್ | ಸದಸ್ಯರು |
| 4. | ಡಾ. ಪಿ. ಬಾಲಕೃಷ್ಣನ್ | ಸದಸ್ಯರು |
| 5. | ಶ್ರೀ ಕೆ.ಎಂ. ವೀರಯ್ಯ | ಸದಸ್ಯರು |
| 6. | ಡಾ. ಡಿ.ಎಂ. ಚಂದರಗಿ | ಸದಸ್ಯ-ಕಾರ್ಯದರ್ಶಿ |

ಪ್ರಾರಂಭದಲ್ಲಿ, ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಇಪ್ಪತ್ತನಾಲ್ಕನೇಯ ಸಭೆಗೆ ಸರ್ವಸದಸ್ಯರನ್ನು ಮಾನ್ಯ ಕುಲಪತಿಗಳು ಹಾಗೂ ಸಭಾಧ್ಯಕ್ಷರು ಸ್ವಾಗತ ಕೋರಿದರು. ತದನಂತರ, ಕಾರ್ಯಸೂಚಿಯ ಪ್ರಕಾರ ಚರ್ಚಿಸಿ, ಕೆಳಕಂಡಂತೆ ತೀರ್ಮಾನಗಳನ್ನು ಕೈಗೊಳ್ಳಲಾಯಿತು.

| | |
|---|---|
| ಐಟಂ-1 | **ದಿನಾಂಕ 15-6-2015 ರಂದು ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಇಪ್ಪತ್ಮೂರನೇಯ ಸಭೆಯ ನಡುವಳಿಗಳನ್ನು ಸ್ಥಿರೀಕರಿಸುವುದು**<br><br>**ಠರಾವು:**<br>ದಿನಾಂಕ 15-6-2015 ರಂದು ಜರುಗಿದ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಇಪ್ಪತ್ಮೂರನೇಯ ಸಭೆಯ ನಡುವಳಿಕೆಗಳನ್ನು ಓದಲಾಯಿತೆಂದು ಪರಿಗಣಿಸಿ, ಸ್ಥಿರೀಕರಿಸಲಾಯಿತು.<br>**(ಕ್ರಮ: ಕುಲಸಚಿವರು)** |
| ಐಟಂ-2 | **ದಿನಾಂಕ 15-6-2015 ರಂದು ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಇಪ್ಪತ್ಮೂರನೇಯ ಸಭೆಯ ನಡುವಳಿಗಳ ಪ್ರಕಾರ ಕೈಗೊಂಡ ಕ್ರಮಗಳಿಗೆ ಅನುಮೋದನೆ ನೀಡುವುದು**<br><br>**ಠರಾವು:**<br>ದಿನಾಂಕ 15-6-2015 ರಂದು ಜರುಗಿದ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಇಪ್ಪತ್ಮೂರನೇಯ ಸಭೆಯ ನಡುವಳಿಕೆಗಳ ಪ್ರಕಾರ ಕೈಗೊಂಡ ಕ್ರಮಗಳಿಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.<br><br>ಮುಂದುವರೆದು, ಲ್ಯಾಪ್‌ಟಾಪ್‌ಗಳನ್ನು ಖರೀದಿಸುವ ವಿಷಯಕ್ಕೆ (ಕಾರ್ಯಸೂಚಿ ಸಂಖ್ಯೆ. 8) ಅನುಮೋದಿಸುತ್ತ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಇ-ಆಡಳಿತ ರವರಿಂದ ಈ ಕುರಿತು ಎಂಪನೆಲ್ ಮಾಡಿದ ಕಂಪನಿಗಳ ಪಟ್ಟಿಯನ್ನು ತರಿಸಿಕೊಳ್ಳಲು ಘನ ವೇದಿಕೆಯು ಸಲಹೆ ನೀಡಿತು. ಇದರಿಂದಾಗಿ ಕೃವಿವಿ ರಾಯಚೂರಿನ ಇತರೇ ಐ.ಸಿ.ಟಿ. ಗಳ ಖರೀದಿಗಾಗಿಯೂ ಬಳಸಲು ಸಹ ಅನುಕೂಲವಾಗುವುದು.<br>**(ಕ್ರಮ: ಕುಲಸಚಿವರು)** |
| ಐಟಂ-3 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ 2014-15 ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳಿಗೆ ಅನುಮೋದನೆ ಕುರಿತು.**<br><br>**ಠರಾವು:**<br>ವಿಸ್ತೃತ ಚರ್ಚೆಯ ನಂತರ, 2013-14 ನೇ ಸಾಲಿನ ವಾರ್ಷಿಕ ಖರ್ಚುವೆಚ್ಚಗಳಿಗೆ ಲೆಕ್ಕಪರಿಶೋಧನೆಗಾಗಿ ರಾಜ್ಯ ಲೆಕ್ಕಪತ್ರ ಇಲಾಖೆಗೆ ಸಲ್ಲಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. ಮುಂದುವರೆದು, ಅಂಕಿ-ಅಂಶಗಳ ಸರಳ ಗ್ರಹಿಕೆಗೆ ಗಣಕಯಂತ್ರ ಪದ್ಧತಿಯಲ್ಲಿ ಅರ್ಧವಿರಾಮ ಅಳವಡಿಸಲು ಸಲಹೆ ನೀಡಿತು.<br>**(ಕ್ರಮ: ಹಣಕಾಸು ನಿಯಂತ್ರಣಾಧಿಕಾರಿಗಳು)** |

| | |
|---|---|
| ಐಟಂ– 4 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ 2014–15 ನೇ ಸಾಲಿನ ವಾರ್ಷಿಕ ವರದಿಯನ್ನು ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಸಲ್ಲಿಸುವ ಕುರಿತು.**<br>**ಠರಾವು:**<br>ಚರ್ಚೆಯ ನಂತರ, ಕೃಷಿ ವಿಶ್ವವಿದ್ಯಾಲಯ, ರಾಯಚೂರಿನ 2014–2015 ನೇ ಸಾಲಿನ ವಾರ್ಷಿಕ ವರದಿಗೆ ವಿದ್ಯಾರ್ಥಿಗಳ ಸಾಧನೆಗಳನ್ನು ಅವರುಗಳ ವ್ಯಾಸಂಗ ಮಾಡುತ್ತಿರುವ ಪದವಿ, ವರ್ಷದ ವಿವರ ಹಾಗೂ ಫೋಟೋಗಳೊಂದಿಗೆ ವಾರ್ಷಿಕ ವರದಿಯಲ್ಲಿ ಸೇರಿಸುವ ಸಲಹೆಯೊಂದಿಗೆ ಘನ ವೇದಿಕೆಯು ಅನುಮೋದನೆ ನೀಡಿತು. ವಿಶ್ವವಿದ್ಯಾಲಯದ ಸಂಘಟನೆಯ ವಿವಿಧ ಹಂತಗಳಲ್ಲಿ ಅಧಿಕಾರ ಚಲನೆಯ ನಕಾಶೆಯಲ್ಲಿ ಎಲ್ಲಾ ಪ್ರಾಧಿಕಾರಗಳವರ ವಿವರಗಳೊಂದಿಗೆ ಪರಿಪೂರ್ಣ ಚಿತ್ರಣವನ್ನು ಒದಗಿಸಲು ಸಹ ಸಲಹೆ ನೀಡಿತು. **(ಕ್ರಮ : ಶಿಕ್ಷಣ ನಿರ್ದೇಶಕರು)** |
| ಐಟಂ– 5 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವ್ಯಾಪ್ತಿಯಲ್ಲಿಯ ಎಲ್ಲಾ ಆಧೀನ ಸಂಸ್ಥೆಗಳ ಆಂತರಿಕ ಲೆಕ್ಕ ಪರಿಶೋಧನೆಯನ್ನು ಕೈಗೊಳ್ಳಲು KIPA ಸಂಸ್ಥೆಯ ಮುಖಾಂತರ ರಾಜ್ಯ ಲೆಕ್ಕಪತ್ರ ಇಲಾಖೆಯ ನಿವೃತ್ತ ಸಿಬ್ಬಂದಿಯವರನ್ನು ನೇಮಿಸಿಕೊಳ್ಳುವ ಕುರಿತು**<br>**ಠರಾವು:**<br>ಚರ್ಚೆಯ ನಂತರ, ಕೃವಿವಿ ರಾಯಚೂರಿನ ಅಡಿ ಬರುವ ಎಲ್ಲಾ ಕೇಂದ್ರಗಳ 2009–10 ರಿಂದ 2014–15 ರ ಅವಧಿಯ ಆಂತರಿಕ ಲೆಕ್ಕ ಪರಿಶೋಧನೆಯನ್ನು (KIPA) ಸಂಸ್ಥೆಯ ನಿವೃತ್ತ ನೌಕರರ ಎರಡು ತಂಡಗಳ ಸಹಾಯದಿಂದ ಕೈಗೊಳ್ಳುವ ಸಲಹೆಯೊಂದಿಗೆ ಸದರಿ ವಿಷಯಕ್ಕೆ ಘನ ವೇದಿಕೆಯು ಅನುಮೋದನೆ ನೀಡಿತು.<br>**(ಕ್ರಮ : ಹಣಕಾಸು ನಿಯಂತ್ರಣಾಧಿಕಾರಿಗಳು)** |
| ಐಟಂ– 6 | **ಗೃಹ ನಿರ್ಮಾಣ ಮುಂಗಡ / ಗೃಹ ಖರೀದಿ ಮುಂಗಡ ಪ್ರಸ್ತಾವನೆಗಳಿಗೆ ಕಾನೂನು ಸಲಹೆ ನೀಡುವ ಸಲುವಾಗಿ ಶುಲ್ಕವನ್ನು ಹೆಚ್ಚಿಸುವ ಕುರಿತು.**<br>**ಠರಾವು:**<br>ವಿಸ್ತೃತ ಚರ್ಚೆಯ ನಂತರ, ಕಾನೂನು ಸಲಹೆ ನೀಡುವ ಸಲುವಾಗಿ ಶುಲ್ಕವನ್ನು ಪ್ರಸ್ತುತ ರೂ. 500/– ರಿಂದ ರೂ. 1000/– ಗಳಿಗೆ ಹೆಚ್ಚಿಸುವ ಪ್ರಸ್ತಾವನೆಗೆ ಘನ ವೇದಿಕೆಯು ಅನುಮೋದನೆ ನೀಡಿತು.<br>**(ಕ್ರಮ : ಕುಲಸಚಿವರು / ಹಣಕಾಸು ನಿಯಂತ್ರಣಾಧಿಕಾರಿಗಳು)** |
| ಐಟಂ– 7 | **ಎಪ್ರೀಲ್ ಮತ್ತು ಮೇ 2015 ರಲ್ಲಿ ಕೆಲಸದ ಗುತ್ತಿಗೆ ಆಧಾರದ ಮೇಲೆ ತೊಡಗಿಸಿಕೊಂಡ ಕಾರ್ಮಿಕರಿಗೆ ಕೂಲಿಯನ್ನು ನೀಡಲು ಅನುಮತಿ ನೀಡುವ ಕುರಿತು**<br>**ಠರಾವು:**<br>ವಿವರವಾದ ಚರ್ಚೆಯ ನಂತರ, ಕೃಷಿ ಸಂಶೋಧನಾ ಕೇಂದ್ರ ಮತ್ತು ಕೃಷಿ ವಿಜ್ಞಾನ ಕೇಂದ್ರಗಳಲ್ಲಿ ಎಪ್ರೀಲ್–ಮೇ, 2015 ರಲ್ಲಿ ಪರಿಸ್ಥಿತಿ ಹಾಗೂ ಅವಶ್ಯಕವಿರುವ ಸ್ವರೂಪದ ಕಾರ್ಯಗಳನ್ನು ಗಮನದಲ್ಲಿಟ್ಟುಕೊಂಡು ಸದರಿ ಪ್ರಸ್ತಾವನೆಗೆ ಘನ ವೇದಿಕೆಯು ಅನುಮೋದನೆ ನೀಡಿತು.<br>**(ಕ್ರಮ : ಸಂಶೋಧನಾ ನಿರ್ದೇಶಕರು / ಹಣಕಾಸು ನಿಯಂತ್ರಣಾಧಿಕಾರಿಗಳು)** |
| ಐಟಂ– 8 | **ಡಾ. ಕೆ.ಎಂ. ವಿಶ್ವನಾಥ, ನಿವೃತ್ತ ವೈದ್ಯಾಧಿಕಾರಿಗಳವರನ್ನು ಕೃವಿವಿ ರಾಯಚೂರಿನಲ್ಲಿ ಗುತ್ತಿಗೆ ಆಧಾರದ ಮೇಲೆ ವೈದ್ಯಾಧಿಕಾರಿ ಎಂದು ನೇಮಕ ಮಾಡಿಕೊಂಡಿದ್ದನ್ನು ಸ್ಥಿರೀಕರಿಸುವ ಕುರಿತು.**<br>**ಠರಾವು:**<br>ವಿವರವಾದ ಚರ್ಚೆಯ ನಂತರ, ಆವರಣದಲ್ಲಿಯ ವಿದ್ಯಾರ್ಥಿಗಳ, ಶಿಕ್ಷಕ ಮತ್ತು ಶಿಕ್ಷಕೇತರ ಸಿಬ್ಬಂದಿಯವರ ಹಾಗೂ ಕೃಷಿ ಕಾರ್ಮಿಕರ ಯೋಗಕ್ಷೇಮಕ್ಕಾಗಿ ವೈದ್ಯಾಧಿಕಾರಗಳ ಸೇವೆಯು ಅವಶ್ಯಕವೆಂದು ಭಾವಿಸಿ ಸದರಿ ವಿಷಯಕ್ಕೆ ಘನ ವೇದಿಕೆಯು ಸರ್ವಾನುಮತದಿಂದ ಅನುಮೋದನೆ ನೀಡಿ ಸ್ಥಿರೀಕರಿಸಿತು.<br>**(ಕ್ರಮ: ಕುಲಸಚಿವರು)** |

| | |
|---|---|
| ಐಟಂ– 9 | **ಸಿ.ಎ.ಎಸ್.2006 ಯೋಜನೆಯಡಿ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಶಿಕ್ಷಕರ (ಎ.ಜಿ.ಪಿ ರೂ.6000 ರಿಂದ ರೂ.7000 ಮತ್ತು ರೂ.7000 ರಿಂದ ರೂ.8000 ಅಡಿ) ಪದೋನ್ನತಿ ಕುರಿತು**<br><br>**ಠರಾವು:**<br>ಸಿ.ಎ.ಎಸ್.–2006 ಅಡಿ ಎ.ಜಿ.ಪಿ. ರೂ. 6000 ರಿಂದ ಎ.ಜಿ.ಪಿ. ರೂ. 7000 ಕ್ಕೆ (34 ಶಿಕ್ಷಕರುಗಳಿಗೆ) ಹಾಗೂ ಎ.ಜಿ.ಪಿ. ರೂ. 7000 ರಿಂದ ಎ.ಜಿ.ಪಿ. ರೂ. 8000 ಕ್ಕೆ (8 ಶಿಕ್ಷಕರುಗಳಿಗೆ) ಯಾದಿಯಲ್ಲಿ ನಮೂದಿಸಿರುವಂತೆ ಅರ್ಹ ಶಿಕ್ಷಕರ ಮುಂಬಡ್ತಿಗಾಗಿ ಘನ ವೇದಿಕೆಯು ಅನುಮೋದನೆ ನೀಡಿತು.<br>**(ಕ್ರಮ: ಕುಲಸಚಿವರು)** |
| ಐಟಂ– 10 | **ಉನ್ನತ ವ್ಯಾಸಂಗವಾದ ಪಿ.ಹೆಚ್.ಡಿ. ಪದವಿಯ ಅಧ್ಯಯನಕ್ಕಾಗಿ 2015–16 ನೇ ಸಾಲಿನಲ್ಲಿ ಸೇವಾನಿರತ ಶಿಕ್ಷಕರು / ವಿಜ್ಞಾನಿಗಳಿಗೆ ಪ್ರತಿನಿಯೋಜನೆ ಸೌಲಭ್ಯವನ್ನು ನೀಡುವ ಕುರಿತು.**<br><br>**ಠರಾವು:**<br>ವಿವರವಾದ ಚರ್ಚೆಯ ನಂತರ, ಮಾನ್ಯ ವ್ಯವಸ್ಥಾಪನಾ ಮಂಡಳಿಯು ಸದರಿ ವಿಷಯಕ್ಕೆ ಅನುಮೋದನೆ ನೀಡಿತು ಹಾಗೂ ಕಾರ್ಯನಿರತ ಶಿಕ್ಷಕರು / ವಿಜ್ಞಾನಿಗಳಿಗೆ ಉನ್ನತ ವ್ಯಾಸಂಗವಾದ ಪಿ.ಹೆಚ್.ಡಿ. ಪದವಿಯಲ್ಲಿ ಕೃವಿವಿ ರಾಯಚೂರಿನಲ್ಲಿ ಅಧ್ಯಯನಕ್ಕಾಗಿ 2015–'16 ನೇ ಸಾಲಿನಲ್ಲಿ ಅನುಕ್ರಮವಾಗಿ ಐದು ಶಿಕ್ಷಕರಿಗೆ ಹಾಗೂ "Sandwich" ಅಡಿ ಅಧ್ಯಯನಕ್ಕಾಗಿ ವಿವಿಧ ವಿಶ್ವವಿದ್ಯಾಲಯಗಳಿಗೆ ಇಬ್ಬರು ಶಿಕ್ಷಕರಿಗೆ ನಿಯೋಜಿಸಿ ಕೈಗೊಂಡ ಕ್ರಮಕ್ಕೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಸ್ಥಿರೀಕರಿಸಿತು. **(ಕ್ರಮ: ಕುಲಸಚಿವರು)** |
| ಐಟಂ– 11 | **ಅಂತರರಾಷ್ಟ್ರೀಯ ತರಬೇತಿ / ಕಾರ್ಯಾಗಾರಗಳಲ್ಲಿ / ಸಮ್ಮೇಳನ / ಅಲ್ಪಾವಧಿ ಕೋರ್ಸ್ ಇತ್ಯಾದಿಗಳಲ್ಲಿ ಶಿಕ್ಷಕರು /ವಿಜ್ಞಾನಿಗಳಿಗೆ ವಿದೇಶಗಳಿಗೆ ಪ್ರತಿನಿಯೋಜನೆ ಮಾಡುವ ಕುರಿತು**<br><br>**ಠರಾವು:**<br>ದೀರ್ಘ ಚರ್ಚೆಯ ನಂತರ, ಹನ್ನೆರಡು ಶಿಕ್ಷಕರು /ವಿಜ್ಞಾನಿಗಳಿಗೆ ವಿದೇಶಗಳಿಗೆ ಪ್ರತಿನಿಯೋಜನೆ ಮಾಡಿ ಕೈಗೊಂಡ ಕ್ರಮಕ್ಕೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿ ಸ್ಥಿರೀಕರಿಸಿತು.<br>**(ಕ್ರಮ: ಕುಲಸಚಿವರು)** |
| ಐಟಂ– 12 | **ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಹೊಸ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ಕುರಿತು.**<br><br>**ಠರಾವು:**<br>ವಿವರವಾದ ಚರ್ಚೆಯ ನಂತರ, ಮಾನ್ಯ ವ್ಯವಸ್ಥಾಪನಾ ಮಂಡಳಿಯು ಸದರಿ ವಿಷಯಕ್ಕೆ ಅನುಮೋದನೆ ನೀಡಿತು.<br>**(ಕ್ರಮ: ಕಾರ್ಯನಿರ್ವಾಹಕ ಅಭಿಯಂತರರು)** |
| ಐಟಂ– 13 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವಿವಿಧ ಆವರಣಗಳಲ್ಲಿ ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಟೆಂಡರ್ ಮಾಡಿದ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ಕುರಿತು.**<br><br>**ಠರಾವು:**<br>ವಿವರವಾದ ಚರ್ಚೆಯ ನಂತರ, ಕಾಮಗಾರಿ ಸಂ. 1/65, 2/65 ಮತ್ತು 8/65 ಗಳನ್ನು ಪುನ: ಕರೆಯುವ ಸಲಹೆಯೊಂದಿಗೆ ಸದರಿ ವಿಷಯಕ್ಕೆ ಘನ ವೇದಿಕೆಯು ಅನುಮೋದನೆ ನೀಡಿತು.<br>**(ಕ್ರಮ: ಕಾರ್ಯನಿರ್ವಾಹಕ ಅಭಿಯಂತರರು)** |

| | |
|---|---|
| ಐಟಂ–14 | **ವಿಶ್ವವಿದ್ಯಾಲಯದ ಮುಖ್ಯ ಆಡಳಿತ ಭವನ ಕಟ್ಟಡದ ಕಾಮಗಾರಿಯ ಹಾಗೂ ಕೃಷಿ ಮಹಾವಿದ್ಯಾಲಯ ಗುಲಬರ್ಗಾದ ಗ್ರಂಥಾಲಯ ಕಟ್ಟಡದ ಕಾಮಗಾರಿಯ ಪರಿಷ್ಕ್ರತ ಅಂದಾಜು ಮೊತ್ತಕ್ಕೆ ಅನುಮೋದನೆ ಕುರಿತು.**<br>**ಠರಾವು:**<br>ದೀರ್ಘ ಚರ್ಚೆಯ ನಂತರ, ವಿಶ್ವವಿದ್ಯಾಲಯದ ಮುಖ್ಯ ಆಡಳಿತ ಭವನ ಕಟ್ಟಡದ ಕಾಮಗಾರಿಯ ರೂ. 21,38,00,000.00 ಗಳ ಪರಿಷ್ಕ್ರತ ಅಂದಾಜು ಪ್ರಸ್ತಾವನೆಗೆ ಘನ ವೇದಿಕೆಯು ಅನುಮೋದನೆ ನೀಡಿತು ಹಾಗೂ ಕೃಷಿ ಮಹಾವಿದ್ಯಾಲಯ ಕಲಬುರಗಿಯ ಗ್ರಂಥಾಲಯ ಕಟ್ಟಡದ ಕಾಮಗಾರಿಯ ರೂ. 2,84,68,069.00 ಗಳ ಪರಿಷ್ಕ್ರತ ಅಂದಾಜು ಪ್ರಸ್ತಾವನೆಯನ್ನು ಮುಂದುಡಲಾಯಿತು.<br>**(ಕ್ರಮ: ಕುಲಸಚಿವರು / ಕಾರ್ಯನಿರ್ವಾಹಕ ಅಭಿಯಂತರರು)** |
| ಐಟಂ–15 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮೂಲ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳ ಪರಿಕಲ್ಪನೆ ಹಾಗೂ ನೀಲಿ ನಕ್ಷೆಗಳ ತಯಾರಿಕೆಗಾಗಿ ತಾಂತ್ರಿಕ ಸಲಹೆಗಾರರು/ ವಾಸ್ತು ಶಿಲ್ಪಿಗಳನ್ನು ನಿಯೋಜನೆ ಮಾಡಿಕೊಳ್ಳಲು ಕರೆದ ಟೆಂಡರ್ ಅನುಮೋದನೆ ಕುರಿತು**<br>**ಠರಾವು:**<br>ವಿವರವಾದ ಚರ್ಚೆಯ ನಂತರ, ಎಲ್ಲಾ ಮೂವರು ತಾಂತ್ರಿಕ ಸಲಹೆಗಾರರು/ ವಾಸ್ತು ಶಿಲ್ಪಿಗಳನ್ನು ಎಂಪೆನೆಲ್ ಮಾಡಿಕೊಳ್ಳಲು ಘನ ವೇದಿಕೆಯು ಅನುಮೋದನೆ ನೀಡಿತು ಹಾಗೂ ಸದರಿಯವರುಗಳು ಸಲ್ಲಿಸಿದ ಕಾಮಗಾರಿಯ ಪ್ರಸ್ತಾವನಆಧರಿಸಿ ಸೂಕ್ತ ಸಲಹೆಗಾರರಿಗೆ (ತಾಂತ್ರಿಕ ಸಲಹೆಗಾರರೊಬ್ಬರಿಗೆ) ಕಾಮಗಾರಿ ಕೈಗೊಳ್ಳಲು ಕೊಡಲಾಗುವುದು.<br>**(ಕ್ರಮ: ಕುಲಸಚಿವರು / ಕಾರ್ಯನಿರ್ವಾಹಕ ಅಭಿಯಂತರರು)** |
| ಐಟಂ–16 | **ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಪ್ರಯೋಗಾಲಯ ಉಪಕರಣಗಳನ್ನು ಖರೀದಿಸಲು ಅನುಮೋದನೆ ಕುರಿತು.**<br>ವಿವರವಾದ ಚರ್ಚೆಯ ನಂತರ, ಮಾನ್ಯ ವ್ಯವಸ್ಥಾಪನಾ ಮಂಡಳಿಯು ಸದರಿ ವಿಷಯಕ್ಕೆ ಅನುಮೋದನೆ ನೀಡಿತು. **(ಕ್ರಮ: ಸರಕು ಖರೀದಿ ಅಧಿಕಾರಿಗಳು)** |
| | **ಹೆಚ್ಚುವರಿ ಕಾರ್ಯಸೂಚಿ ವಿಷಯಗಳು.** |
| ಐಟಂ–1 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸದಸ್ಯರುಗಳಾದ ಡಾ. ಸಾದತ್ ಅಲಿ ಖಾನ್ ಹಾಗೂ ಶ್ರೀ ಪ್ರವೀಣ್ ವಿ. ನಾಯಕ್ ಅವರುಗಳು ಕೈಗೊಂಡ ಶೈಕ್ಷಣಿಕ ಪ್ರವಾಸದ ಸಂಬಂಧ ವರದಿಯನ್ನು ಸಲ್ಲಿಸುವ ಕುರಿತು.**<br>**ಠರಾವು:**<br>ವಿವರವಾದ ಚರ್ಚೆಯ ನಂತರ ಹಾಗೂ ಮಾನ್ಯ ಸದಸ್ಯರುಗಳು ಎಸ್.ಕೆ.ಯು.ಎ.ಎಸ್.ಟಿ., ಶ್ರೀನಗರ, ಸಿ.ಐ.ಟಿ.ಹೆಚ್., ಶ್ರೀನಗರ, ಸಿ.ಪಿ.ಆರ್.ಐ. ಶಿಮ್ಲಾ ಹಾಗೂ ಐ.ಎ.ಆರ್.ಐ., ನವದೆಹಲಿ ಗೆ ಭೇಟಿ ನೀಡಿದ ಪ್ರವಾಸದ ಅನುಭವ ಕುರಿತು ಚರ್ಚೆಯ ನಂತರ ಘನ ವೇದಿಕೆಯು ಸದರಿ ವಿಷಯಕ್ಕೆ ಅನುಮೋದನೆ ನೀಡಿತು.<br>**(ಕ್ರಮ: ಕುಲಸಚಿವರು)** |
| ಐಟಂ–2 | **ಕೃಷಿ ಸಂಶೋಧನಾ ಕೇಂದ್ರ ಧಡೇಸೂಗೂರು ಮತ್ತು ಗಂಗಾವತಿಗಾಗಿ ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಕಂಬೈನ್ ಟ್ರ್ಯಾಕ್ ಹಾರ್ವೆಸ್ಟರ್ ಖರೀದಿಸಲು ಅನುಮೋದನೆ ಕುರಿತು.**<br>**ಠರಾವು:**<br>ವಿಸ್ತೃತವಾದ ಚರ್ಚೆಯ ನಂತರ, ಕ್ಷೇತ್ರಗಳಲ್ಲಿ ಕೃಷಿ ಚಟುವಟಿಕೆಗಳ ಯಾಂತ್ರೀಕರಣಕ್ಕೆ ಅವಕಾಶ ಒದಗಿಸಲು ಹಾಗೂ ಹಾರ್ವೆಸ್ಟರ್‌ನ ಅವಶ್ಯಕತೆಯನ್ನು ಗಮನಿಸಿ ಸದರಿ ಪ್ರಸ್ತಾವನೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.<br>**(ಕ್ರಮ: ಸರಕು ಖರೀದಿ ಅಧಿಕಾರಿಗಳು)** |

| | ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೇ ವಿಷಯಗಳು |
|---|---|
| | ➢ ದಿನಾಂಕ 20-9-2015 ರಂದು ಜರುಗಿದ ಮಾನ್ಯ ವ್ಯವಸ್ಥಾಪನಾ ಮಂಡಳಿಯ 20ನೇ ಸಭೆಯಲ್ಲಿ ಕೈಗೊಂಡ ನಿರ್ಣಯದ ಪ್ರಕಾರ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸದಸ್ಯರುಗಳು ಅಂತರ ರಾಷ್ಟ್ರೀಯ ಶೈಕ್ಷಣಿಕ ಪ್ರವಾಸ ಕೈಗೊಳ್ಳಲು ನಿರ್ಧರಿಸಲಾಯಿತು ಹಾಗೂ ಸದರಿ ಪ್ರವಾಸದಲ್ಲಿ ಕುಲಸಚಿವರು ಭಾಗಿಯಾಗಲು ಮತ್ತು ಪ್ರವಾಸಕ್ಕಾಗಿ ಸೂಕ್ತ ವ್ಯವಸ್ಥೆ ಮಾಡಲು ಸಲಹೆ ನೀಡಿದರು. **(ಕ್ರಮ: ಕುಲಸಚಿವರು)**<br><br>➢ ಸಿಬ್ಬಂದಿಯವರ ವೈದ್ಯಕೀಯ ವೆಚ್ಚದ ಬಿಲ್ಲುಗಳನ್ನು ಕರ್ನಾಟಕ ಮೆಡಿಕಲ್ ಅಟೆಂಡೆನ್ಸ್ ನಿಮಾವಳಿಗಳನ್ನು ಅನುಸರಿಸಲು ಶ್ರೀ ಕೆ.ಎಂ. ವೀರಯ್ಯ, ಸರಕಾರದ ಉಪ-ಕಾರ್ಯದರ್ಶಿಗಳು(ಹಣಕಾಸು) ಅವರು ಸಲಹೆ ನೀಡಿದರು. ಮುಂದುವರೆದು, ಕೆಲ ಪ್ರಮುಖ (genuine) ಪ್ರಕರಣಗಳಲ್ಲಿ ರೂ. 25,000/- (ವಿಶ್ವವಿದ್ಯಾಲಯವು ನಿಗದಿಪಡಿಸಿದ ಮಿತಿ) ಗಿಂತ ಹೆಚ್ಚು ಕ್ಲೇಮು ಮಾಡಿದಲ್ಲಿ, ಅಂತಹ ಪ್ರಕರಣಗಳನ್ನು ಪದ್ಧತಿಯನ್ನು ಪಾಲಿಸಿದ ನಂತರ ಅನುಮೋದನೆ ಕೊಡಬೇಕಾದ ಮೊತ್ತವನ್ನು ನಿರ್ಧರಿಸಲು ವ್ಯವಸ್ಥಾಪನಾ ಮಂಡಳಿಯ ಮುಂದಿಡಲು ಸೂಚಿಸಲಾಯಿತು.<br>**(ಕ್ರಮ: ಕುಲಸಚಿವರು/ ಹಣಕಾಸು ನಿಯಂತ್ರಣಾಧಿಕಾರಿಗಳು)**<br><br>➢ ಬೆಲ್ ಕಂಪನಿಯ ಪ್ರತಿನಿಧಿಗಳವರು ಪ್ರಸ್ತುತಪಡಿಸಿದಂತೆ ಕೃವಿವಿ ರಾಯಚೂರಿನಲ್ಲಿ ಐ.ಟಿ. ಸೊಲ್ಯೂಶನ್ಸ್ ಮತ್ತು ಅಪ್ಲಿಕೇಶನ್‌ಗಾಗಿ ಪ್ರಥಮ ಹಂತದ ಕಾರ್ಯಕ್ಕಾಗಿ ಕಂಪನಿಗಳವರೊಂದಿಗೆ ದರ ನಿಷ್ಕರ್ಷೆ ಮಾಡಲು ಮಾನ್ಯ ಸಭಾಧ್ಯಕ್ಷರಿಗೆ ಅಧೀಕಾರವಹಿಸಲಾಯಿತು ಹಾಗೂ ಸದರಿ ಮಾಹಿತಿಯನ್ನು ಹಣಕಾಸು ಸಮಿತಿ ಹಾಗೂ ಘನ ವೇದಿಕೆಗೆ ಮಂಡಿಸಲು ತಿಳಿಸಲಾಯಿತು.<br>**(ಕಾರ್ಯನಿರ್ವಾಹಕ ಅಭಿಯಂತರರು)**<br><br>➢ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸದಸ್ಯರಿಗೆ ನೀಡಲಾಗುವ ಆಸನ ಶುಲ್ಕವನ್ನು ರೂ. 1000/- ದಿಂದ ರೂ. 2000/- ಗಳಿಗೆ ಹೆಚ್ಚಿಸುವ ಪ್ರಸ್ತಾವನೆಯನ್ನು ಡಿ.ಪಿ.ಎ.ಆರ್.ಗೆ ಅನುಮೋದನೆಗಾಗಿ ಸಲ್ಲಿಸಲು ಸಲಹೆ ನೀಡಲಾಯಿತು. ಅದರಂತೆ, ರಸ್ತೆಯ ಮೈಲೇಜ್ ದರವನ್ನು ಹೆಚ್ಚಿಸುವ ಪ್ರಸ್ತಾವನೆಯನ್ನು ಆರ್.ಟಿ.ಓ. ಆಯುಕ್ತರಿಗೆ ಅನುಮೋದನೆಗಾಗಿ ಸಲ್ಲಿಸಲು ಸಲಹೆ ನೀಡಲಾಯಿತು.<br>**(ಕ್ರಮ: ಕುಲಸಚಿವರು)**<br><br>➢ ಮಾನ್ಯ ಸದಸ್ಯರಾದ ಶ್ರೀ ಪ್ರವೀಣ್ ನಾಯಕ್ ಅವರು ಸೇವಾ ಸಂಬಂಧಿ ಕೇಳಿದ ಅಂಶಗಳಲ್ಲಿ ಪ್ರಮುಖವಾಗಿ ರಜೆಗಳ ಮಂಜೂರಾತಿ ಹಾಗೂ ಇತರೇ ಆಡಳಿತಾತ್ಮಕ ವಿಷಯಗಳ ಕುರಿತು ಕೇಳಿದ್ದಕ್ಕೆ ಈಗಾಗಲೇ ಕೆ.ಸಿ.ಎಸ್.ಆರ್. ಹಾಗೂ ಪರಿನಿಯಮಗಳ ಹೊರತಾಗಿ ಹೊರಡಿಸಲಾದ ಆದೇಶಗಳನ್ನು ಹಿಂಪಡೆಯಲು ಸಲಹೆ ನೀಡಲಾಯಿತು. **(ಕ್ರಮ: ಕುಲಸಚಿವರು)**<br><br>➢ ಅದರಂತೆ ಶಿಕ್ಷಕೇತರ ಸಿಬ್ಬಂದಿಯವರಿಗೆ ಗೌಪ್ಯ ವರದಿಯಲ್ಲಿ ನೀಡಲಾಗುವ ಅಂಕಗಳ ಪದ್ಧತಿಯನ್ನು ತೆಗೆದುಹಾಕಲು ಸಹ ಸಲಹೆ ನೀಡಲಾಯಿತು. ಸರಕಾರದ ಆದೇಶದಂತೆ ಈಗಾಗಲೇ ನೀಡಲಾಗುತ್ತಿರುವ ಗುಣಾಂಕಗಳ ಪದ್ಧತಿಯನ್ನು ಅನುಸರಿಸಲು ವ್ಯವಸ್ಥೆ ಮಾಡಲು ತಿಳಿಯಪಡಿಸಲಾಯಿತು.<br>**(ಕ್ರಮ: ಕುಲಸಚಿವರು)**<br><br>➢ ಮಾನ್ಯ ಸದಸ್ಯರಾದ ಡಾ. ಹೆಚ್.ಎಸ್. ಸಾದತ್ ಅಲಿ ಖಾನ್ ಅವರು "ಕರ್ನಾಟಕದಲ್ಲಿ ಕೃಷಿ ವಾಣಿಜ್ಯ ಸಾಮರ್ಥ್ಯ" ಕುರಿತಾಗಿ ಸೆಮಿನಾರ್ ಅನ್ನು ಇಂಡಿಯನ್ ಸೊಸೈಟಿ ಆಫ್ ಅಗ್ರಿಕಲ್ಚರಲ್ |

| | |
|---|---|
| | ಮಾರ್ಕೆಟಿಂಗ್ ಮತ್ತು ಕೃವಿವಿ ರಾಯಚೂರಿನ ವತಿಯಿಂದ ಜಂಟಿಯಾಗಿ ಆಯೋಜಿಸಲು ಸಲಹೆ ನೀಡಿದರು. ಮುಂದುವರೆದು, ಸದರಿ ಸೆಮಿನಾರ್ ಅನ್ನು ಕೃವಿವಿ ರಾಯಚೂರಿನಲ್ಲಿ ಆಯೋಜಿಸಲು ಮುಖ್ಯಸ್ಥರು, ಕೃಷಿ ಅರ್ಥಶಾಸ್ತ್ರ ವಿಭಾಗ ಅವರನ್ನು ಸಂಯೋಜಕರನ್ನಾಗಿ ನೇಮಿಸಲು ಹಾಗೂ ಅದಕ್ಕೆ ಸೂಕ್ತ ವ್ಯವಸ್ಥೆ ಮಾಡಲು ತೀರ್ಮಾನಿಸಲಾಯಿತು. **(ಕ್ರಮ: ಕುಲಸಚಿವರು)** |

ಕುಲಸಚಿವರು ಹಾಗೂ ವ್ಯವಸ್ಥಾಪನಾ ಮಂಡಳಿಯ ಸದಸ್ಯ-ಕಾರ್ಯದರ್ಶಿಯವರ ಧನ್ಯವಾದಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

**(ಪಿ.ಎಂ. ಸಾಲಿಮಠ)**
ಕುಲಪತಿಗಳು ಹಾಗೂ ಅಧ್ಯಕ್ಷರು
ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು.

**(ಡಿ.ಎಂ. ಚಂದರಗಿ)**
ಕುಲಸಚಿವರು ಹಾಗೂ ಸದಸ್ಯ-ಕಾರ್ಯದರ್ಶಿ
ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು.

**(ಡಿ.ಎಂ. ಚಂದರಗಿ)**
ಕುಲಸಚಿವರು ಹಾಗೂ ಸದಸ್ಯ-ಕಾರ್ಯದರ್ಶಿ
ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು.

24